# ಭಾರತದ ಪ್ಲಾಂಟೇಶನ್ ಕಾರ್ಮಿಕರ ಅಧಿನಿಯಮ, ೧೯೫೧ – ಮರುಪರಿಶೀಲನೆಯ ಅಗತ್ಯತೆ

ಮಾಲಿನಿ ಎಲ್ ತಂತ್ರಿ

## ಪೀಠಿಕೆ

ಭಾರತದ ಪ್ಲಾಂಟೇಶನ್ ಕಾರ್ಮಿಕರ ಹಿತಾಸಕ್ತಿಗಳು ಹಾಗೂ ಕಲ್ಯಾಣವನ್ನು ಸಾಧಿಸಿ ರಕ್ಷಿಸಲು ಭಾರತ ಸರ್ಕಾರವು ರಚಿಸಿದ್ದ ಕಾರ್ಮಿಕರ ಪರಿಶೀಲನಾ ಸಮಿತಿಯ ಶಿಫಾರಸುಗಳನ್ನು ಆಧರಿಸಿ ಭಾರತೀಯ ಸಂಸತ್ತು ೧೯೫೧ರ ಅಕ್ಟೋಬರ್ ತಿಂಗಳಿನಲ್ಲಿ ಪ್ಲಾಂಟೇಶನ್ ಕಾರ್ಮಿಕರ ಅಧಿನಿಯಮವನ್ನು (ಪಿಎಲ್ಎ) ಜಾರಿಗೆ ತರಲು ಒಪ್ಪಿಗೆ ನೀಡಿತು. ಆ ಪ್ರಕಾರವಾಗಿ ಈ ಅಧಿನಿಯಮ ೧೯೫೪ರಲ್ಲಿ ಜಾರಿಗೆ ಬಂದಿತು. ಈ ಅಧಿನಿಯಮವು ಪ್ಲಾಂಟೇಶನ್‌ಮಾಲೀಕರುತಮ್ಮಕಾರ್ಮಿಕರಿಗೆ ಕಡ್ಡಾಯವಾಗಿ ಆರೋಗ್ಯ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದ ಹಲವಾರು ಸೌಲಭ್ಯಗಳನ್ನು ನೀಡಲೇಬೇಕೆಂದು ಅದೇಶಿಸುತ್ತದೆ. ಹಾಗೆ ನೋಡಿದರೆಕಾರ್ಮಿಕರಿಂದಾಗಲೀಅಥವಾ ಸರ್ಕಾರದಿಂದಾಗಲೀ ಯಾವುದೇ ಕೊಡುಗೆಯನ್ನು ಸ್ವೀಕರಿಸದೆ ಪ್ಲಾಂಟೇಶನ್ ಮಾಲೀಕರು ತಮ್ಮ ಕಾರ್ಮಿಕರಿಗೆ ಉಚಿತವಾಗಿ ವಸತಿ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಇದೊಂದೇ ಉದ್ಯಮವು ಈ ರೀತಿ ಸ್ವಯಂಪ್ರೇರಿತವಾಗಿ ಸೌಲಭ್ಯಗಳನ್ನು ನೀಡುತ್ತಿರುವ ಉದ್ಯಮವೆಂಬುದನ್ನು ಗಮನಿಸ ಬಹುದಾಗಿದೆ. ಈ ರೀತಿಯ ಖರ್ಚನ್ನು ಪ್ಲಾಂಟೇಶನ್ ಉದ್ಯಮವು ಸಮಾಜ ಕಲ್ಯಾಣಕ್ಕಾಗಿನ ವೆಚ್ಚ ಎಂದು ಪರಿಗಣಿಸುತ್ತದೆ. ಇತ್ತೀಚೆಗೆ ಈ ವಲಯದಲ್ಲಿ ಸ್ಪರ್ಧಾತ್ಮಕತೆಯು ನಶಿಸಿ ಹೋಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಈ ವೆಚ್ಚವನ್ನು ಪಿಎಲ್ಎ ಅಧಿನಿಯಮದಲ್ಲಿ ಸೂಚಿಸಿರುವ ಅನೇಕ ಸೌಲಭ್ಯಗಳನ್ನು ನಿಜವಾದ ಅರ್ಥದಲ್ಲಿ ಕೊಡದಿರುವುದಕ್ಕಾಗಿಯೇ ಸಮಾಜಕಲ್ಯಾಣ ವೆಚ್ಚವನ್ನು ಸರಿಯಾದ ರೀತಿಯಲ್ಲಿ ಮಾಡಲಾಗುತ್ತಿಲ್ಲ ಎಂಬ ಟೀಕೆಯು ಕೇಳಿ ಬರುತ್ತಿದೆ. ಇದೂ ಅಲ್ಲದೇ ಈಗ ನಡೆದಿರುವ ಸಂಶೋಧನಾ ಅಧ್ಯಯನಗಳ ಪ್ರಕಾರ ಪಿಎಲ್ಎಯಲ್ಲಿ ಸೂಚಿಸಿರುವ ಅನೇಕ ಅಂಶಗಳು ಸಾಂಸ್ಥಿಕ ಬೇರ್ಪಡಿಕೆಯನ್ನು ವ್ಯವಸ್ಥಿತವಾಗಿ ಮಾಡುತ್ತಿದೆ ಎಂಬುದು ಸಹ ಬೆಳಕಿಗೆ ಬಂದಿದೆ. ಇದರಿಂದಾಗಿ ಪಿಎಲ್ಎಯ ಮೂಲಕ ಪ್ಲಾಂಟೇಶನ್ ಕಾರ್ಮಿಕರಿಗೆ ಇತರ ಕಾರ್ಮಿಕರ ರೀತಿಯಲ್ಲಿ ಸಮಾನತೆಯನ್ನು ಒದಗಿಸಬೇಕೆಂಬ ಉದ್ದೇಶವೇ ಹಾಳಾಗುತ್ತಿದೆ ಎಂಬುದಾಗಿಯೂ ಈ ಅಧ್ಯಯನಗಳು ತಿಳಿಸಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕಾರ್ಯನೀತಿ ಟಿಪ್ಪಣಿಯು ಪಿಎಲ್ಎ ೧೯೫೧ (ಮತ್ತು ಅದರ ಪರಿಷ್ಕರಣೆಗಳು) ಅನ್ನು ವಿಮರ್ಶಾತ್ಮಕವಾಗಿ ಮರುಪರಿಶೀಲನೆ ಮಾಡಿದೆ. ಈ ಮರುಪರಿಶೀಲನೆಯಿಂದಾಗಿ ಕಂಡು ಬಂದಿರುವ ಅನೇಕ ವಿನ್ಯಾಸಾತ್ಮಕ ಅಸಂಗತತೆಗಳು ಹಾಗೂ ಅವನ್ನು ಸರಿಪಡಿಸಲು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಈ ಟಿಪ್ಪಣಿಯಲ್ಲಿ ಸೂಚಿಸಲಾಗಿದೆ.


## ಫಲಿತಾಂಶಗಳು

- **ಪ್ಲಾಂಟೇಶನ್‌ವಲಯದ ಆಯಾಮ: ತಾಳಿಕೊಳ್ಳುತ್ತಿರುವ ಸಂಘರ್ಷ**

  ಪ್ಲಾಂಟೇಶನ್ ಮಾಲೀಕರು ಹಾಗೂ ಸರ್ಕಾರಿ ಸಂಸ್ಥೆಗಳು ಪ್ಲಾಂಟೇಶನ್ ಪದದ ವ್ಯಾಖ್ಯಾನ ಹಾಗೂ ಅರ್ಥದ ಬಗ್ಗೆ ಮೂಲಭೂತ ಭಿನ್ನಾಭಿಪ್ರಾಯವನ್ನು ಹೊಂದಿದ್ದಾರೆ. ಅದು ಹೇಗೆಂದರೆ ಪ್ಲಾಂಟೇಶನ್ ಬೆಳೆಗಳನ್ನು ಕೇವಲ ಬೆಳೆಗಳಾಗಿ ಪರಿಗಣಿಸಿದರೆ ಅದು ಕೃಷಿ ಉದ್ದಿಮೆಗೆ ಸೇರುತ್ತದೆ. ಇಲ್ಲದೇ ಹೋದಲ್ಲಿಅದು ಕೈಗಾರಿಕೆಯಾಗಿ ಪರಿಗಣಿಸಲ್ಪಡುತ್ತದೆ. ಈ ಭಿನ್ನಾಭಿಪ್ರಾಯದ ಪರಿಣಾಮವಾಗಿ ಪ್ಲಾಂಟೇಶನ್ ಉದ್ದಿಮೆಯು ಕೃಷಿ ಹಾಗೂ ಕೈಗಾರಿಕಾ ಸಚಿವಾಲಯಗಳು ಹಾಗೂ ಸಂಬಂಧಿತ ಇಲಾಖೆಗಳು ರೂಪಿಸಿರುವ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಡುತ್ತದೆ. ಈ ರೀತಿಯಾಗಿ ಎರಡೂ ಸಚಿವಾಲಯಗಳ ನಿಯಮ ನಿಬಂಧನೆಗಳಿಗೆ ಒಳಪಡುವ ಈ ಉದ್ದಿಮೆಯು ಎರಡು ಅಲುಗಿನ ಕತ್ತಿಯ ಮೇಲೆ ನಿಂತಂತಿದೆ. ವೃತ್ತಿಯ ಅರ್ಥದಲ್ಲಿ ನೋಡಿದರೆ ಪ್ಲಾಂಟೇಶನ್ ಬೆಳೆಗಳ ಸಾಗುವಳಿಯು ವಾಣಿಜ್ಯ ಬೆಳೆಗಳ ಸಾಗುವಳಿ ರೀತಿಯಲ್ಲಿ ಆಗುತ್ತದೆ. ಆ ಪ್ರಕಾರ ಇದರ ಉತ್ಪಾದನೆ, ಸಾಗುವಳಿ ಪದ್ಧತಿಗಳು ಹಾಗೂ ರಫ್ತು ಇತ್ಯಾದಿಗಳು ಕೃಷಿ ಉತ್ಪನ್ನಗಳ ರಫ್ತು ನಿಯಮಗಳಿಗೆ ಒಳಪಡುತ್ತದೆ. ಆದರೆ ಈ ಉದ್ದಿಮೆಯ ಕಾರ್ಮಿಕರಿಗೆ ಸಂಬಂಧಿಸಿದಂತೆ ಹೇಳುವುದಾದರೆ ಇದನ್ನು ಕೈಗಾರಿಕಾ ವಲಯವೆಂದು ಪರಿಗಣಿಸಿ, ಕೈಗಾರಿಕಾ ಕಾರ್ಮಿಕರ ಹಿತಾಸಕ್ತಿಗಳಿಗೆ ರೂಪಿಸಿರುವ ನಿಯಮ ನಿಬಂಧನೆಗಳನ್ನು ಪ್ಲಾಂಟೇಶನ್ ಮಾಲೀಕರು ಪಾಲಿಸಬೇಕಾಗುತ್ತದೆ. ಜೊತೆಗೆ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನೂ ಸಹ ಒದಗಿಸಬೇಕಾಗುತ್ತದೆ. ವಾಣಿಜ್ಯ ಕೃಷಿ ಬೆಳೆಗಳನ್ನು ಬೆಳೆಯುವ ಇತರ ಬೆಳೆಗಾರರು ಈ ರೀತಿಯ ನಿಯಮಗಳಿಗೆ ಬದ್ಧರಾಗಿರುವುದಿಲ್ಲ. ಇದೇ ರೀತಿಯಲ್ಲಿಯೇ ಈ ಬೆಳೆಗಾರರನ್ನು ವಾಣಿಜ್ಯ ಬೆಳೆಗಾರರೆಂದು ಪರಿಗಣಿಸಲ್ಪಟ್ಟರೆ ಅವರುಗಳು ವಿವಿಧ ರೀತಿಯ ಕೃಷಿ ತೆರಿಗೆಗಳನ್ನು ಕಟ್ಟಬೇಕಾಗುತ್ತದೆ. ಪ್ಲಾಂಟೇಶನ್ ಬೆಳೆಗಾರರನ್ನು ಕೈಗಾರಿಕಾ ವಲಯದಲ್ಲಿ ಪರಿಗಣಿಸಲ್ಪಟ್ಟರೆ ಅವರುಗಳು ವಿವಿಧಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡು ಕಾರ್ಮಿಕರ ಹಿತಾಸಕ್ತಿಗಳನ್ನು ಕಾಯಬೇಕಾಗುತ್ತದೆ. ಒಟ್ಟಿನಲ್ಲಿ ಪ್ಲಾಂಟೇಶನ್ ಮಾಲೀಕರುರಾಷ್ಟ್ರದ ಬೇರೆ ಯಾವುದೇ ಕೈಗಾರಿಕಾ ಘಟಕಗಳು ಪಾಲಿಸದಂತಹ ಎರಡೆರಡು ರೀತಿಯ ನಿಮಯ ನಿಬಂಧನೆಗಳನ್ನು ಅನುಸರಿಸಬೇಕಾಗಿದೆ.

- **ಸಾಂಸ್ಥಿಕ ಸೇರ್ಪಡೆ ಮತ್ತು ಬೇರ್ಪಡೆ**

  ಪಿಎಲ್ಎ ಅಧಿನಿಯಮವನ್ನು ರೂಪಿಸಿರುವ ರೀತಿಯಲ್ಲಿಯೇ ಅದಕ್ಕೆ ಅನೇಕ ಸೇರ್ಪಡೆಗಳನ್ನೂ ಮತ್ತು ಬೇರ್ಪಡೆಗಳನ್ನೂ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಉದಾಹರಣೆಗೆ ಹೇಳುವುದಾದರೆ ಸಣ್ಣ ಪ್ಲಾಂಟೇಷನ್ ಬೆಳೆಗಾರರು, ತಾತ್ಕಾಲಿಕ ಕಾರ್ಮಿಕರು ಅಥವಾ ದಿನಗೂಲಿ ಕಾರ್ಮಿಕರನ್ನು ಅಧಿನಿಯಮ ಪಟ್ಟಿಯಲ್ಲಿ ಸೇರಿಸಲಾಗಿಲ್ಲ (ಪಟ ೧). ಆದರೆ ದಿನಗೂಲಿ ಕಾರ್ಮಿಕರೇ ಪ್ಲಾಂಟೇಶನ್ ಕಾರ್ಮಿಕ ಬಲದಲ್ಲಿ ಹೆಚ್ಚಿನ ಪಾಲನ್ನೂ ಹೊಂದಿರುತ್ತಾರೆ. ದತ್ತಾಂಶವು ದೊರಕಿರುವ ಇತ್ತೀಚಿನ ವರ್ಷದ (೨೦೧೦–೧೧) ವಿವರಗಳನ್ನು ಪರಿಶೀಲಿಸಿದಾಗ ಭಾರತದಲ್ಲಿ ಒಟ್ಟಾರೆ ಪ್ಲಾಂಟೇಶನ್ ಬೆಳೆಗಳ ಪ್ರದೇಶಗಳಲ್ಲಿನ ಹಿಡುವಳಿಗಳ ಸಂಖ್ಯೆಗಳ





ಸಂಪಾದಕರು:
ಎಸ್. ಮಾನಸಿ

ಪೈಕಿ ಸಣ್ಣ ಮತ್ತು ಮಧ್ಯಮ ಹಿಡುವಳಿಗಳೇ ಹೆಚ್ಚಿರುವುದುಕಂಡುಬರುತ್ತದೆ. ಪ್ರಮುಖ ಪ್ಲಾಂಟೇಶನ್ ಬೆಳೆಗಳಲ್ಲೂ ಸಹ ಸಣ್ಣ ಹಿಡುವಳಿದಾರರು ಕಾಫಿ ಬೆಳೆಯಲ್ಲಿ ಶೇ.೯.೪೬ ರಷ್ಟು, ಟೀ ಬೆಳೆಯಲ್ಲಿ ಶೇ.೩೬.೬೭ ರಷ್ಟು ಹಾಗೂ ರಬ್ಬರ್ ಬೆಳೆಯಲ್ಲಿ ಶೇ.೯೯.೭೭ ರಷ್ಟು ಇದ್ದಾರೆ. ಜೋಸೆಫ್ ಮಹಾಶಯರು (೨೦೧೪) ಪ್ರತಿಪಾದಿಸುವ ಪ್ರಕಾರ ಪಿಎಲ್ಎ ಯಲ್ಲಿನ ಬೇರ್ಪಡಿಕೆ ಗುಣವು ಅದರ ಅನುಷ್ಠಾನದ ವಿನ್ಯಾಸದಲ್ಲಿ, ಪ್ಲಾಂಟೇಶನ್‌ಮಂಡಳಿಗಳ ಕಾರ್ಯನೀತಿಗಳಲ್ಲಿ, ತಿಳುವಳಿಕೆಯಲ್ಲಿ, ಉತ್ಪಾದನೆಯಲ್ಲಿ, ಉತ್ತೇಜನೆಯಲ್ಲಿ, ಮಾರಾಟದಲ್ಲಿ, ಕಾರ್ಮಿಕ ಮಾರುಕಟ್ಟೆಯಲ್ಲಿ, ನಾವೀನ್ಯತೆಯಲ್ಲಿ ಹಾಗೂ ಸಾಂಸ್ಥಿಕ ರಚನೆಯಲ್ಲಿ ಕಾಣಬಹುದಾಗಿದೆ.



**ಪಟ ೧: ಪ್ಲಾಂಟೇಶನ್‌ಕಾರ್ಮಿಕರರಚನಾತ್ಮಕ ವಿನ್ಯಾಸ**





ಆಧಾರ: ಲೇಖಕರ ಸಂಗ್ರಹಣೆ

- **ಪ್ಲಾಂಟೇಶನ್‌ವಲಯದ ವೇತನ ಹಾಗೂ ಸುಸ್ಥಿರತೆಯಲ್ಲಿನ ಸಮಾಜಕಲ್ಯಾಣ ಅಂಶಗಳು**

  ಇತರ ಕೈಗಾರಿಕೆಗಳು ಪ್ಲಾಂಟೇಶನ್ ಕೈಗಾರಿಕೆಗಿಂತ ಇನ್ನೂ ಹೆಚ್ಚಿನ ಅನೇಕ ಆರ್ಥಿಕ ಪ್ರೋತ್ಸಾಹಕ ಅಂಶಗಳನ್ನು ಹಾಗೂ ಸಹಾಯಧನವನ್ನು ಪಡೆದರೂ ಸಹ, ಪ್ಲಾಂಟೇಶನ್‌ಉದ್ದಿಮೆಯು ಮಾತ್ರ ಕಡ್ಡಾಯವಾಗಿ ಸಮಾಜಕಲ್ಯಾಣ ಸೌಲಭ್ಯಗಳನ್ನು ತನ್ನ ಕಾರ್ಮಿಕರಿಗೆ ಒದಗಿಸಲೇಬೇಕಾಗಿರುವುದು ಕುತೂಹಲಕಾರಿ ಅಂಶವಾಗಿದೆ. ಇದರಿಂದಾಗಿ ಪ್ಲಾಂಟೇಶನ್ ವಲಯವು ಅಪಾರ ಪ್ರಮಾಣದ ಸಾಮಾಜಿಕ ಖರ್ಚನ್ನು ಭರಿಸಬೇಕಾಗಿದೆ. ಜೊತೆಗೆ ಕಾರ್ಮಿಕರಿಗೆ ಸರ್ಕಾರವು ವಿಧಿಸಿರುವ ಕನಿಷ್ಟ ವೇತನ ಕಾಯ್ದೆಯ ಪ್ರಕಾರ ವೇತನಗಳನ್ನು ನೀಡಬೇಕಾಗಿರುವುದರಿಂದ ಈ ವಲಯದ ಸ್ಪರ್ಧಾತ್ಮಕತೆಯು ನಶಿಸಿಹೋಗುತ್ತಿದೆ. ಈ ನಶಿಸುವಿಕೆಯನ್ನು ನಿರ್ದಿಷ್ಟವಾಗಿ ಭಾರತದಟೀ ಪ್ಲಾಂಟೇಷನ್‌ಗಳಲ್ಲಿ ಕಾಣಬಹುದಾಗಿದೆ. ಟೀ ಪ್ಲಾಂಟೇಷನ್‌ಗಳು ದೊಡ್ಡ ಬೆಳೆಗಾರರ ಕೈವಶದಲ್ಲಿದ್ದರೆ, ಕಾಫಿ ಮತ್ತು ರಬ್ಬರ್ ಪ್ಲಾಂಟೇಷನ್‌ಗಳು ಸಣ್ಣ ಬೆಳೆಗಾರರ ಕೈಗಳಲ್ಲಿವೆ. ಉದಾಹರಣೆಗೆ ಹೇಳುವುದಾದರೆ ಕಳೆದ ೨೦ ವರ್ಷಗಳಲ್ಲಿ (೧೯೯೫–೨೦೧೪) ದಕ್ಷಿಣ ಭಾರತದ ಎಲ್ಲಾ ಟೀ ಪ್ಲಾಂಟೇಷನ್‌ಗಳಲ್ಲಿಯೂ ಸಹ ಸರಾಸರಿ ವೇತನವನ್ನು ೫ ಪಟ್ಟು ಹೆಚ್ಚಿಸಲಾಗಿದೆ. ಆದರೆ ಟೀ ಬೆಳೆಯ ಧಾರಣೆಯು ೨ ಪಟ್ಟು ಸಹ ಆಗಿಲ್ಲ (ಚಿತ್ರ ೧, ೨ ಮತ್ತು ೪). ಇದನ್ನೇ ವಿಸ್ತರಿಸಿ ಹೇಳುವುದಾದರೆ ೧೯೯೫ ರ ಧಾರಣೆಗಳಲ್ಲಿ ಸರಾಸರಿ ವೇತನವು ೫೦೦ ಕ್ಕೂ ಹೆಚ್ಚು ಪಟ್ಟು ಹೆಚ್ಚಾಗಿದೆ. ಆದರೆ ಸರಾಸರಿ ಟೀ ಬೆಲೆಗಳು ೧೮೬ ಪಟ್ಟು ಮಾತ್ರ ಹೆಚ್ಚಾಗಿದೆ (ಚಿತ್ರ ೨ ಮತ್ತು ೩). ಹೆಚ್ಚಿನ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಟೀ ಎಲೆಗಳನ್ನು ಕೀಳುವವರು ಹಾಗೂ ಹರಾಜು ಮಾಡುವವರು ೧ ಬಟ್ಟಲು ಚಹಾಗೆ ಇರುವ ಬೆಲೆಯ ಅತಿ ಕಡಿಮೆ ಪಾಲನ್ನು ಪಡೆಯುತ್ತಾರೆ. ಇದಕ್ಕೆ ಪ್ರತಿಯಾಗಿ ಕಾರ್ಖಾನೆಗಳು ಶೇ.೭ ರಷ್ಟನ್ನೂ ಹಾಗೂ ಚಿಲ್ಲರೆ ಮಾರಾಟಗಾರರು ಮತ್ತು ಟೀ ಸೊಪ್ಪು ಹದ ಮಾಡುವವರು ಒಟ್ಟಾಗಿ ಶೇ.೮೮ ರಷ್ಟು ಪಾಲನ್ನು ಪಡೆಯುತ್ತಾರೆ (ಚಿತ್ರ ೫). ಬೇರೆಲ್ಲಾ ಕಾರಣಗಳ ಮಧ್ಯೆ ಈ ಒಂದು ಮುಖ್ಯ


ಕಾರಣವು ಟೀ ಬೆಳೆಗಾರರು ಸುಸ್ಥಿರತೆ ಹೊಂದಿಲ್ಲದೆ ಇರುವುದಕ್ಕೂ ಹಾಗೂ ರಫ್ತು ಸಾಮರ್ಥ್ಯದ ಸ್ಪರ್ಧಾತ್ಮಕತೆಯನ್ನೂ ಕಳೆದುಕೊಳ್ಳುತ್ತಿರುವುದಕ್ಕೆ ಕಾರಣವಾಗಿದೆ ಎನ್ನಬಹುದಾಗಿದೆ.

**ಚಿತ್ರ ೧: ಪ್ಲಾಂಟೇಶನ್‌ಕಾರ್ಮಿಕರ ಸರಾಸರಿ ವೇತನದ ಏರಿಕೆ–ಇಳಿಕೆ ಪ್ರವೃತ್ತಿ (ಪ್ರಮುಖದಕ್ಷಿಣ ಭಾರತದ ರಾಜ್ಯಗಳು)**





Source: UPASI

**ಚಿತ್ರ ೨: ದಕ್ಷಿಣ ಭಾರತದಟೀ ಪ್ಲಾಂಟೇಷನ್‌ಗಳಲ್ಲಿ ಟೀ ಬೆಳೆಯ ಸರಾಸರಿ ಬೆಲೆ ಹಾಗೂ ಸರಾಸರಿ ಬೆಲೆ ಸೂಚ್ಯಂಕ**





Source: UPASI

**ಚಿತ್ರ ೩: ದಕ್ಷಿಣ ಭಾರತದ ಪ್ರಮುಖ ರಾಜ್ಯಗಳಲ್ಲಿ ಟೀಪ್ಲಾಂಟೇಶನ್‌ಕಾರ್ಮಿಕರ ಸರಾಸರಿ ವೇತನ ಸೂಚ್ಯಂಕಗಳ ಏರಿಕೆ–ಇಳಿಕೆ ಪ್ರವೃತ್ತಿ**





Source: UPASI

**ಚಿತ್ರ ೪: ದಕ್ಷಿಣ ಭಾರತದಲ್ಲಿ ಟೀ ಪ್ಲಾಂಟೇಷನ್‌ಗಳಲ್ಲಿನ ವೇತನ ಹಾಗೂ ಟೀ ಬೆಳೆಯ ಧಾರಣೆಗಳ ವಾರ್ಷಿಕ ಸಂಯುಕ್ತ ಬೆಳವಣಿಗೆ ವೇಗ**




Source: UPASI

**ಚಿತ್ರ ೫: ಟೀ ಸರಪಳಿಯಲ್ಲಿ ಯಾರಿಗೆ ಎಷ್ಟು ಪಾಲುಸಿಗುತ್ತದೆ ಎನ್ನುವುದನ್ನುತೋರಿಸುವ ಪಟ್ಟಿ**




(Adopted from War on Want and Ana 2010)

ಮೇಲಿನ ಪಟಗಳನ್ನು ಅವಲೋಕಿಸಿದ ನಂತರ, ದಕ್ಷಿಣ ಭಾರತದಟೀ ಪ್ಲಾಂಟೇಷನ್‌ಗಳ ದೃಷ್ಟಿಯಲ್ಲಿ ಈ ರೀತಿಯಾಗಿ ಹೇಳಬಹುದಾಗಿದೆ: ಪಟ್ಟಿ ೧ರ ಪ್ರಕಾರ ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಒಟ್ಟಾರೆ ವೇತನ ದೊರಕುವ ಅನುಕೂಲವು ಕ್ರಮವಾಗಿ ಶೇ.೭೬, ಶೇ.೬೫ ಮತ್ತು ಶೇ.೭೫ ಗಳಾಗಿವೆ. ಸರಾಸರಿಯಾಗಿ ಹೇಳುವುದಾದರೆ ೨೦೦೮–೦೯ರಲ್ಲಿ ಪ್ಲಾಂಟೇಶನ್ ಉದ್ದಿಮೆಯು ಪ್ರತಿ ಹೆಕ್ಟೇರ್ ೧ಕ್ಕೆ ನೀಲಗಿರಿ ಪ್ರದೇಶದಲ್ಲಿ ೨೨,೦೦೦ ರೂಗಳಷ್ಟು ಸಾಮಾಜಿಕ ವೆಚ್ಚವನ್ನು ಭರಿಸಿದೆ. ಇದರಿಂದಾಗಿ ಪ್ಲಾಂಟೇಶನ್ ಮಾಲೀಕರು ಇದಕ್ಕೆ ಪರ್ಯಾಯಗಳನ್ನು ಹುಡುಕಲು ಪ್ರಯತ್ನಿಸುತ್ತಿದ್ದಾರೆ. ಅವೆಂದರೆ ಖಾಯಂ ಕಾರ್ಮಿಕರ ಬದಲಾಗಿ ತಾತ್ಕಾಲಿಕ/ದಿನಗೂಲಿ ನೌಕರರನ್ನು ನೇಮಿಸಿಕೊಳ್ಳುವುದು, ಕಾರ್ಮಿಕರಿಗೆ ಬದಲಾಗಿ ಯಂತ್ರೋಪಕರಣಗಳನ್ನು ಬಳಸುವುದು ಇತ್ಯಾದಿ. ಉದಾಹರಣೆಗೆ ಹೇಳುವುದಾದರೆ ಹಸಿರು ಎಲೆಗಳನ್ನು ಸಂಗ್ರಹಿಸುವುದು ಹಾಗೂ ಟೀ ಎಲೆಗಳನ್ನು ಕೀಳುವುದಕ್ಕೆ ಮಹಿಳಾ ಉದ್ಯೋಗಿಗಳನ್ನು ನೇಮಿಸಿಕೊಳ್ಳುವಿಕೆ ಇತ್ಯಾದಿ.

**ಪಟ್ಟಿ ೧: ದಕ್ಷಿಣ ಭಾರತದಲ್ಲಿಟೀಪ್ಲಾಂಟೇಶನ್‌ಕಾರ್ಮಿಕರ ಸರಾಸರಿ ದಿನವೊಂದರ ವೇತನ-ಅಕ್ಟೋಬರ್-ಡಿಸೆಂಬರ್ ೨೦೧೫ ತ್ರೈಮಾಸಿಕ (ರೂಗಳಲ್ಲಿ)**

| ವಿವರಗಳು | ಕರ್ನಾಟಕ** | ಕೇರಳ | ತಮಿಳುನಾಡು |
|---|---|---|---|
| ವೇತನ (ಅಕ್ಟೋಬರ್/ಡಿಸೆಂಬರ್ ೨೦೧೫) | ದಿನಗೂಲಿ | ದಿನಗೂಲಿ | ದಿನಗೂಲಿ |
| ಮೂಲ ವೇತನ (ತಮಿಳುನಾಡಿನ ಸಂಚಿತ ವೇತನ) | ೧೭೫.00 | ೩೦೧.00 | ೯೬.೬೫ |
| ಬದಲಾಗುವ ತುಟ್ಟಿ ಭತ್ಯೆ | ೭೨.೯೭ | – | ೧೩೩.೩೮ |
| ಉಪ ಮೊತ್ತ | ೨೪೭.೯೭ | ೩೦೧.00 | ೨೩೦.೦೩ |
| ಶಾಸನ ಬದ್ಧ ಸೌಲಭ್ಯಗಳು | ೧೮೮.೬೭ | ೧೯೬.೦೧ | ೧೬೧.೮೩ |
| ಶಾಸನ ಬದ್ಧವಲ್ಲದ ಸೌಲಭ್ಯಗಳು | ೧೩.೦೨ | ೧೫.೮೧ | ೧೨.೦೯ |
| ಕಾರ್ಮಿಕನೊಬ್ಬನಿಗೆ ದೊರೆಯುವ ದಿನದ ವೇತನ | ೪೪೯.೬೪ | ೫೧೨.೭೯ | ೪೦೩.೯೪ |
| ಒಟ್ಟು ವೇತನದಲ್ಲಿಶಾಸನ ಬದ್ಧ ಸೌಲಭ್ಯದ ಶೇ. ಪ್ರಮಾಣ | ೭೬ | ೬೫ | ೭೦ |

** ಕರ್ನಾಟಕದಲ್ಲಿ ವೇತನವನ್ನು ಲೆಕ್ಕ ಹಾಕುವಾಗ ಒಟ್ಟುಒಂದು ವರ್ಷದಲ್ಲಿ ಸರಾಸರಿಯಾಗಿ ೨೪೦ ದಿನಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಕೇರಳ ಹಾಗೂ ತಮಿಳುನಾಡುಗಳಲ್ಲಿ ವೇತನವನ್ನು ಲೆಕ್ಕ ಹಾಕುವಾಗ ೨೮೦ ದಿವಸಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ದಕ್ಷಿಣ ಭಾರತದಲ್ಲಿ ಶಾಸನಬದ್ಧ ಸೌಲಭ್ಯಗಳು ಸರಾಸರಿಯಾಗಿ ವೇತನದ ಶೇ ೭೨.೬೭ ರಷ್ಟಿರುತ್ತದೆ.

ಆಧಾರ: ಯುಪಿಎಎಸ್ಐ

## ಕಾರ್ಯನೀತಿ ರೂಪಿಸುವಿಕೆಗೆ ಮಾಡುತ್ತಿರುವ ಸಲಹೆಗಳು

ಪ್ಲಾಂಟೇಶನ್‌ಕಾರ್ಮಿಕರ ಅಧಿನಿಯಮವನ್ನು ರೂಪಿಸುವ ಸಮಯದಲ್ಲಿಯೇ ಸಾಂಸ್ಥಿಕ ಸೇರ್ಪಡೆ ಮತ್ತು ಬೇರ್ಪಡೆಗಳನ್ನು ಅದರೊಳಗೆ ಹಾಸುಹೊಕ್ಕಾಗಿಸಿ, ಆ ಮೂಲಕ ಅನೌಪಚಾರಿಕ ಉದ್ಯೋಗಕ್ಕೆ ಎಡೆಮಾಡಿಕೊಡಲಾಗಿದೆ ಎಂಬುದು ನಿಸ್ಸಂದೇಹವಾಗಿದೆ. ಇದೂ ಅಲ್ಲದೆ, ಪ್ಲಾಂಟೇಶನ್ ವಲಯದ ಸ್ಪರ್ಧಾತ್ಮಕತೆಯನ್ನು ಇನ್ನೂ ಅನೇಕ ವಾಸ್ತವ ಅಂಶಗಳು ಬಂಧಿಸುತ್ತವೆ. ಈ ಅಂಶಗಳನ್ನು ಆದ್ಯತೆಯ ಮೇರೆಗೆ ಪರಿಹರಿಸದ ಪಕ್ಷದಲ್ಲಿ ಮುಂದಿನ ಕೆಲವು ದಶಕಗಳಲ್ಲೇ ೨ ಪ್ರಮುಖ ಸವಾಲುಗಳು ತಲೆದೋರುತ್ತವೆ. ಮೊದಲನೆಯದಾಗಿ ಈ ವಲಯದಲ್ಲಿ ಇನ್ನು ಮುಂದೆ ತಾತ್ಕಾಲಿಕ ಉದ್ಯೋಗವೇ ರೂಢಿಯಾಗಬಹುದು ಮತ್ತು ಖಾಯಂ ಕಾರ್ಮಿಕರಿಗೆ ದೊರಕುತ್ತಿದ್ದ ಸೌಲಭ್ಯಗಳು ಇವರಿಗೆ ದೊರಕದಿರಬಹುದು. ಜೊತೆಗೆ ಪ್ಲಾಂಟೇಷನ್‌ಗಳಲ್ಲಿನ ಚಟುವಟಿಕೆಗಳನ್ನು ಹೆಚ್ಚು ಯಾಂತ್ರೀಕೃತಗೊಳಿಸ-ಬಹುದಾಗಿದೆ. ಎರಡನೆಯದಾಗಿ, ಬರುವ ಕೆಲವು ದಶಕಗಳಲ್ಲಿ ಪ್ಲಾಂಟೇಶನ್ ಪ್ರದೇಶಗಳು ತಮ್ಮ ಶ್ರೀಮಂತ ಜೀವವೈವಿಧ್ಯತೆಯನ್ನು ಕಳೆದುಕೊಂಡು ಕಾಂಕ್ರೀಟು ಕಾಡುಗಳಾಗಬಹುದು. ಇದನ್ನು ತಪ್ಪಿಸಲು ಪಿಎಲ್ಎ ೧೯೫೧ ಅಧಿನಿಯಮವನ್ನು ಕೆಳಗೆ ಸೂಚಿಸಿರುವ ಅಂಶಗಳನ್ನನುಸರಿಸಿ ಮರು ಪರಿಶೀಲಿಸಬಹುದಾಗಿದೆ.

- ಪ್ಲಾಂಟೇಶನ್ ಕಾರ್ಮಿಕರ ಅಧಿನಿಯಮದನ್ವಯ ಸರ್ಕಾರವು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಸಾಧ್ಯವಿದ್ದೆಡೆಗಳಲ್ಲೆಲ್ಲಾ ವಿವಿಧಕಲ್ಯಾಣ ಕಾರ್ಯಕ್ರಮಗಳನ್ನು ಸಾಮಾಜಿಕ ವೆಚ್ಚ ಅಂಶದಲ್ಲಿ ಮಿತಗೊಳಿಸಿ ವೇತನ ಸುಧಾರಣೆಯನ್ನು ಮಾಡಬಹುದಾಗಿದೆ. ಉದಾಹರಣೆಗೆ ಹೇಳುವುದಾದರೆ ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಸರ್ಕಾರಗಳು ಅಲ್ಪ ಸಂಖ್ಯಾತರನ್ನು ಮುಖ್ಯವಾಹಿನಿಗೆ ತರುವ ಸಲುವಾಗಿ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿವೆ. ಈ ಕಾರ್ಯಕ್ರಮಗಳು ಸ್ಥಳೀಯ ಆಡಳಿತಗಳ ನಿರಾಸಕ್ತಿಯಿಂದಾಗಿ ಬಹುಪಾಲು ಅನುಷ್ಟಾನಗೊಳ್ಳದೆ ಉಳಿದಿವೆ. ಆದ್ದರಿಂದ ಈ ಬಳಕೆಯಾಗದ ಕಾರ್ಯಕ್ರಮ ಹಾಗೂ ನಿಧಿಗಳನ್ನು ಪ್ಲಾಂಟೇಶನ್ ವಲಯಕ್ಕೆ ವಿಸ್ತರಿಸಲು ಒಂದು ಮಾರ್ಗವನ್ನು ಅಭಿವೃದ್ಧಿಗೊಳಿಸಬೇಕಾಗಿದೆ ಹಾಗೂ ಪ್ಲಾಂಟೇಶನ್ ವಲಯದ ಸಾಮಾಜಿಕ ವೆಚ್ಚವನ್ನು ಎಲ್ಲೆಲ್ಲಿ ಕಡಿಮೆಗೊಳಿಸಬಹುದೋ ಅಲ್ಲಲ್ಲಿ ಇದನ್ನು ಉಪಯೋಗಿಸಬಹುದಾಗಿದೆ. ಆ ಮೂಲಕ ಈ ಕಲ್ಯಾಣ ಕಾರ್ಯಕ್ರಮಗಳ ಪರಿಣಾಮಕಾರಿತ್ವವನ್ನು ಸಹ ಹೆಚ್ಚಿಸಬಹುದಾಗಿದೆ. ಹೀಗೆ ಮಾಡುವಾಗ ಪಿಎಲ್ಎ ಅಧಿನಿಯಮದಲ್ಲಿ ಮಾಡಿಕೊಟ್ಟಿರುವ ಅವಕಾಶಗಳನ್ನು ಸರಳೀಕರಿಸಲು ಬಹಳ ಎಚ್ಚರದಿಂದ ಪ್ರಯತ್ನಿಸಬೇಕು. ಉದಾಹರಣೆಗೆ ಹೇಳುವುದಾದರೆ, ಉತ್ತರಪೂರ್ವ ರಾಜ್ಯಗಳಲ್ಲಿನ ಪ್ಲಾಂಟೇಶನ್ ಮಾಲೀಕರು ಸಾಮಾಜಿಕ ವೆಚ್ಚವನ್ನು ಭರಿಸುವ ರೀತಿಯನ್ನು ಪರಿಶೀಲಿಸಿ ಅದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿರಬಹುದಾದ ದಕ್ಷಿಣ ಭಾರತದ ಪ್ಲಾಂಟೇಶನ್ ಮಾಲೀಕರ ಸಾಮಾಜಿಕ ವೆಚ್ಚ ಅನುಷ್ಠಾನವನ್ನು ಸರಳೀಕೃತಗೊಳಿಸಬಹುದಾಗಿದೆ. ಮುಂದುವರೆದು ಹೇಳಬಹುದಾದರೆ, ಈ ಅಂಶಗಳು ಟೀ ಪ್ಲಾಂಟೇಷನ್, ಕಾಫಿ ಪ್ಲಾಂಟೇಷನ್, ರಬ್ಬರ್ ಪ್ಲಾಂಟೇಶನ್ ಹಾಗೂ ಸಾಂಬಾರು ಪದಾರ್ಥಗಳ ಪ್ಲಾಂಟೇಷನ್‌ಗಳಲ್ಲಿ ನಿರ್ದಿಷ್ಟವಾಗಿ ವ್ಯತ್ಯಯಗೊಳ್ಳುತ್ತಾ ಹೋಗುತ್ತವೆ. ಈ ದಿಶೆಯಲ್ಲಿ ರಚಿಸಲಾದ ಶ್ರೀ ಎನ್ ಎನ್ ಮೆನನ್‌ರವರ ಉನ್ನತ ಮಟ್ಟದ ಸಮಿತಿಯು ಭಾರತೀಯ ಟೀ ಉದ್ದಿಮೆಯ ಸಾಮಾಜಿಕ ವೆಚ್ಚದ ಅಂಶಗಳ ಬಗ್ಗೆ ಪರಿಶೀಲಿಸಿದೆ. ಆ ಸಮಿತಿಯ ಪ್ರಕಾರ, ಪ್ಲಾಂಟೇಶನ್ ವಲಯಕ್ಕೆ ಹೊಂದಿಸಿಕೊಳ್ಳಬಹುದಾದ ಸರ್ಕಾರದ ಯೋಜನೆಗಳು ಈ ರೀತಿ ಇವೆ: ಇಂದಿರಾ ಆವಾಸ ಯೋಜನಾ (ಐಎವೈ) – ವಸತಿ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ; ಸ್ವಚ್ಛ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಸ್ವಜಲಾಧಾರ ಯೋಜನೆ; ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್ಆರ್‌ಹೆಚ್ಎಂ) – ಔಷಧ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ; ಸರ್ವ ಶಿಕ್ಷಾ ಅಭಿಯಾನ (ಎಸ್ಎಸ್ಎ) ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ. ಈ ಯೋಜನೆಗಳು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ, ಆರೋಗ್ಯ ಮತ್ತುಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಮಾನವ ಸಂಪನ್ಮೂಲ ಸಚಿವಾಲಯಗಳ ಆಡಳಿತ ವ್ಯಾಪ್ತಿಗೆ ಬರುತ್ತವೆ.

- ಮೇಲಿನ ಅಂಶದಷ್ಟೇ ಮುಖ್ಯವಾಗಿತಾತ್ಕಾಲಿಕ/ದಿನಗೂಲಿ ಕಾರ್ಮಿಕರಿಗೆ ದೊಡ್ಡ ಎಸ್ಟೇಟುಗಳಲ್ಲಿ ಸಾಮಾಜಿಕ ಭದ್ರತೆಯನ್ನು ಒದಗಿಸಲು ಹಾಗೂ ಸಣ್ಣ ಪ್ಲಾಂಟೇಶನ್ ಮಾಲೀಕರಿಗೂ ಸಹ ಸಾಮಾಜಿಕ ಭದ್ರತೆಯನ್ನು ಒದಗಿಸಲು ಸರ್ಕಾರವು ಮಧ್ಯಪ್ರವೇಶಿಸಿ ಸೂಕ್ತ ಕಾರ್ಯನೀತಿಗಳು ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳಬೇಕಾಗಿದೆ. ಈ ದಿಶೆಯಲ್ಲಿ ಸಂಬಂಧಪಟ್ಟ ಪ್ಲಾಂಟೇಶನ್ ಉತ್ಪನ್ನಗಳ ಮಂಡಳಿಗಳು ಸಕ್ರಿಯ ಪಾತ್ರವನ್ನು ವಹಿಸಬೇಕಾಗಿದೆ.
- ಕೇವಲ ಒಂದು ಕಾನೂನನ್ನು ಜಾರಿಗೊಳಿಸುವುದು ಹಾಗೂ ಅದಕ್ಕೆ ಸೂಕ್ತ ಪರಿಷ್ಕರಣೆಗಳನ್ನು ಮಾಡುವುದರಿಂದ ಈ ಸಮಸ್ಯೆಗಳು ಪರಿಹಾರವಾಗುವುದಿಲ್ಲ – ಆದ್ದರಿಂದ ಈ ಬಗ್ಗೆ ಕಾಲಾನುಕಾಲಕ್ಕೆ ಸೂಕ್ತ ಅಧ್ಯಯನಗಳನ್ನು ಮಾಡುವ ಅಗತ್ಯವಿದೆ. ಈ ಸಂಶೋಧನಾ ಅಧ್ಯಯನಗಳು ಕಾನೂನಿನಲ್ಲಿ ಮಾಡಿಕೊಟ್ಟಿರುವ ಅವಕಾಶಗಳು ಕಾರ್ಮಿಕರ ಮಟ್ಟದಲ್ಲಿ ನಿಜವಾದ ಅರ್ಥದಲ್ಲಿ ಅನುಷ್ಠಾನಗೊಳ್ಳುತ್ತಿವೆಯೇ ಅಥವಾ ಇಲ್ಲವೇ ಎಂಬುದನ್ನು ದೃಢಪಡಿಸುತ್ತವೆ. ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿಯೇ ಕಾಣುವಂತೆ ಪಿಎಲ್ಎ ಅಧಿನಿಯಮದಲ್ಲಿ ಒದಗಿಸಿರುವ ಅನೇಕ ಅನುಕೂಲಗಳು ಹಾಗೂ ಸೌಲಭ್ಯಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಪ್ಲಾಂಟೇಶನ್ ವಲಯವು ಸೋತಿರುವುದನ್ನು ಗಮನಿಸಬಹುದಾಗಿದೆ.

ಈ ಅಧ್ಯಯನದ ಸಂಪೂರ್ಣ ವರದಿಯನ್ನು ನೋಡಲು ಗಮನಿಸಿ: ತಂತ್ರಿ ಮಾಲಿನಿ ಎಲ್., ೨೦೧೭. "ವ್ಯಾಪಾರ ವಹಿವಾಟು, ಲಿಂಗ ಪ್ರಭೇದ ಮತ್ತುಆಹಾರ ಭದ್ರತೆ: ನೀಲಗಿರಿ ಪ್ರದೇಶದ ಟೀ ಪ್ಲಾಂಟೇಷನ್‌ಗಳನ್ನು ನಿರ್ದಿಷ್ಟವಾಗಿ ಗಮನದಲ್ಲಿಟ್ಟುಕೊಂಡು" ಸಿಇಎಸ್‌ಪಿ, ಐಸೆಕ್, ಬೆಂಗಳೂರು.

## ಆಧಾರ ಗಂಥಗಳು/ಲೇಖನಗಳು

ಜೋಸೆಫ್,ಕೆ.ಜೆ. (೨೦೧೪) "ನವೀನ ಪದ್ಧತಿಗಳಲ್ಲಿ ಬೇರ್ಪಡಿಕೆಯನ್ನು ಅನ್ವೇಷಿಸುವಿಕೆ: ಭಾರತದ ಪ್ಲಾಂಟೇಶನ್ ಕೃಷಿಯ ಒಂದು ಅಧ್ಯಯನ". ನವೀನತೆ ಮತ್ತು ಅಭಿವೃದ್ಧಿ, ಸಂಪುಟ ೪, ಸಂಚಿಕೆ ೧, ಪುಟಗಳು ೭೩ ರಿಂದ ೯೦.

ವಾರ್ ಆನ್ ವಾಂಟ್ ಮತ್ತು ಅನಾಮಾರ್ಸರ್ (೨೦೧೦) "ಕಹಿಯಾದ ಒಂದುಕಪ್ ಚಹ: ಭಾರತ ಹಾಗೂ ಕೀನ್ಯಾ ದೇಶಗಳು ಬ್ರಿಟಿಷ್ ಸೂಪರ್ ಮಾರುಕಟ್ಟೆಗಳಿಗೆ ಟೀ ಉತ್ಪನ್ನವನ್ನು ಒದಗಿಸಲು ತಮ್ಮ ಟೀ ಕಾರ್ಮಿಕರನ್ನು ಶೋಷಿಸುತ್ತಿರುವಿಕೆ".